ಕರ್ನಾಟಕ ಸರಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನ ಹಡಗಲಿ

ಸಂ/ಕಂ/ಪಹಣಿ /ತಕರಾರು/10/2015-16 ದಿನಾಂಕ:- 09/03/2016

ಉಪಸ್ಥಿತರು:-

ಹೆಚ್ ವಿಶ್ವನಾಥ

ತಹಶೀಲ್ದಾರರು

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| ಕರೇಗೌಡ್ರ ಶಿವಕುಮಾರ ತಂದೆ ಫಕ್ಕೀರಗೌಡ ಶಿವಲಿಂಗನಹಳ್ಳಿ<br>ಗುರವ ಅವ್ವಕ್ಕ ಉರ್ಫ್ ಅವ್ವಬಾಯಿ ತಂದೆ ದುಂಡಪ್ಪ ಮಾಗಳ | ಎನ್ ಕನ್ನಪ್ಪ ತಂದೆ ಚಂದ್ರಪ್ಪ ಮಾಗಳ |

ದಾವಾ ಜಮೀನಿನ ವಿವರ

| ಗ್ರಾಮ | ಸರ್ವೇ ನಂಬರ | ವಿಸ್ತೀರ್ಣ(ಎಕರೆ.ಸೆಂಟ್ಸ್) |
|---|---|---|
| ಶಿವಲಿಂಗನಹಳ್ಳಿ | 362A | 4.27 |

ಪಿಠೀಕೆ

ಮೇಲಿನ ದಾವಾ ಜಮೀನನ್ನು ವಾದಿಯಾದ ಶ್ರೀ ಕರೇಗೌಡ್ರ ಶಿವಕುಮಾರ ತಂದೆ ಲೇಟ್ ಫಕ್ಕೀರಗೌಡ ಶಿವಲಿಂಗನಹಳ್ಳಿ ಇವರು ನೊಂದಾಯಿತ ಕ್ರಯಪತ್ರ ಡಾ.ನಂ 838/2015-16 ದಿನಾಂಕ 05/06/2015ರ ಪ್ರಕಾರ ಶ್ರೀಮತಿ ಗುರವ ಅವ್ವಕ್ಕ ಉರ್ಫ್ ಅವ್ವಬಾಯಿ ತಂದೆ ದುಂಡಪ್ಪ ಮಾಗಳ ಇವರಿಗೆ ಕ್ರಯಕ್ಕೆ ನೀಡಿರುತ್ತಾರೆ, ಅಂತೆಯೇ ಕ್ರಯ ಪತ್ರ ಪ್ರಕಾರ ಹಕ್ಕುಬದಲಾವಣೆ ಮಾಡಲು ಅರ್ಜಿ ಸ್ವೀಕರಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 128 ರನ್ವಯ ನೊಂದಾಯಿತ ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ ಗ್ರಾಮದಲ್ಲಿ ಗ್ರಾಮಲೆಕ್ಕಾಧಿಕಾರಗಳು ನಿಗಧಿತ ಅವಧಿಯೊಳಗೆ ನಮೂನೆ-21ನ್ನು ಜಾರಿಮಾಡಿರುತ್ತಾರೆ. ನಿಗಧಿತ ಅವಧಿಯೊಳಗೆ ಅಂದರೆ ದಿನಾಂಕ 11/06/2015ರಂದು ಪ್ರತಿವಾದಿಯಾದ ಎನ್ ಕನ್ನಪ್ಪ ತಂದೆ ಚಂದ್ರಪ್ಪ ಮಾಗಳಇವರು ಸದರಿ ದಾವಾದ ಜಮೀನನ್ನು 1973ರಲ್ಲಿ ಪಟ್ಟಾದಾರರಾದ ಕರೇಗೌಡ್ರ ಶಿವಕುಮಾರ ನೊಂದಾಯಿತ್ತ ಆಯ್ಕೆ ಪತ್ರ ಬರೆದುಕೊಟ್ಟಿದ್ದು, ಸದರಿ ಜಮೀನಿನಲ್ಲಿ ತಮ್ಮ ಹಕ್ಕು ಇರುವುದಾಗಿ ತಿಳಿಸಿ ಹಕ್ಕು ಬದಲಾವಣೆ ಪ್ರಕರಣ ಸಂಖ್ಯೆ 177/2014-15 ಕ್ಕೆ ತಕರಾರು ಅರ್ಜಿ ಸಲ್ಲಿಸಿರುತ್ತಾರೆ.

ಮೇಲಿನ ದಾವಾ ಜಮೀನಿನ ಹಕ್ಕು ಬದಲಾವಣೆಗೆ ತಮ್ಮ ಆಕ್ಷೇಪಣೆ ಇರುವುದಾಗಿ ಪ್ರತಿವಾದಿಗಳು ಆಕ್ಷೇಪಣಾ ಅರ್ಜಿ ಸಲ್ಲಿಸಿದ ಕಾರಣ ಈ ಪ್ರಕರಣವನ್ನು ವಿವಾದದಾಸ್ಪದವೆಂದು ಪರಿಗಣಿಸಿ ಕಂದಾಯ ಪರಿವೀಕ್ಷಕರು ಹಡಗಲಿ ಇವರು ಮುಂದಿನ ಸೂಕ್ತ ಕ್ರಮಕ್ಕಾಗಿ ಸಲ್ಲಿಸಲಾಗಿ ಪ್ರಕರಣವನ್ನು ವಿವಾದಿತವೆಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಾಲಂ 129ರ ಪ್ರಕಾರ ವಾದಿ/ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ ವಿಚಾರಣೆಯನ್ನು ದಿನಾಂಕ 03/09/2015 ರಂದು ಪ್ರಾರಂಭಿಸಲಾಯಿತು.

. ವಿಚಾರಣೆ ವೇಳೆ ವಾದಿಗಳಲ್ಲಿ ಒಬ್ಬರಾದ ಹಾಗೂ ಕ್ರಯದಾರರಾದ ಗುರವ ಅವ್ವಕ್ಕ ಉರ್ಫ್ ಅವ್ವಬಾಯಿ ತಂದೆ ದುಂಡಪ್ಪ ಮಾಗಳ ಹಾಜರಿದ್ದು ಹೇಳಿಕೆ ನೀಡಿರುತ್ತಾರೆ. ಹಾಗೂ ವಿಕ್ರಯದಾರರು ಗೈರುಹಾಜರಾಗಿರುತ್ತಾರೆ ಮತ್ತು ಪ್ರತಿವಾದಿಗಳು ಗೈರುಹಾಜರಾಗಿರುತ್ತಾರೆ. ಅಂತೆಯೇ ದಿನಾಂಕ 05/11/2015 ರಂದು ನಡೆದ ವಿಚಾರಣೆ ವೇಳೆ ಪ್ರತಿವಾದಿ ಹಾಗೂ ವಿಕ್ರಯದಾರರು ಗೈರುಹಾಜರಾಗಿದ್ದು, ವಾದಿಗಳಲ್ಲಿ ಒಬ್ಬರಾದ ಹಾಗೂ ಕ್ರಯದಾರರಾದ ಗುರವ ಅವ್ವಕ್ಕ ಉರ್ಫ್ ಅವ್ವಬಾಯಿ ತಂದೆ ದುಂಡಪ್ಪ ಮಾಗಳ ಇವರು ಹಾಜರಿದ್ದು ನೊಂದಾಯಿತ ಕ್ರಯಪತ್ರ ಪ್ರಕಾರ ಹಕ್ಕುಬದಲಾವಣೆ ಮಾಡುವಂತೆ ಕೋರಿರುತ್ತಾರೆ.

ವಾದಿಯಾದ ಶ್ರೀ ಕರೇಗೌಡ್ರ ಶಿವಕುಮಾರ ತಂದೆ ಲೇಟ್ ಫಕ್ಕೀರಗೌಡ ಶಿವಲಿಂಗನಹಳ್ಳಿ ಇವರು ನೊಂದಾಯಿತ ಕ್ರಯಪತ್ರ ಡಾ.ನಂ 838/2015-16 ದಿನಾಂಕ 05/06/2015ರ ಪ್ರಕಾರ ಶ್ರೀಮತಿ ಗುರವ ಅವ್ವಕ್ಕ ಉರ್ಫ್ ಅವ್ವಬಾಯಿ ತಂದೆ ದುಂಡಪ್ಪ ಮಾಗಳ ಇವರಿಗೆ ಕ್ರಯಕ್ಕೆ ನೀಡಿದ್ದು ಕ್ರಯ ಪತ್ರ ಪ್ರಕಾರ ಹಕ್ಕುಬದಲಾವಣೆ ಮಾಡುವುದು ಸಮಂಜಸ ಇರುವುದಾಗಿ ಕಂಡುಬಂದಿರುವುದರಿಂದ ಹಾಗೂ ಪ್ರತಿವಾದಿಗಳು ತಕರಾರು ಅರ್ಜಿ ಮೇರೆಗೆ ನೋಟಿಸು ನೀಡಲಾಗಿ ಗ್ರಾಮದಲ್ಲಿ ವಾಸವಿರುವುದಿಲ್ಲವೆಂದು ತಿಳಿಸಿದ್ದು ಸತತವಾಗಿ ಗೈರುಹಾಜರಾಗಿರುತ್ತಾರೆ, ಕಾರಣ ತಕರಾರು ಅರ್ಜಿಯನ್ನು ತಿರಸ್ಕರಿಸುತ್ತಾ ನೊಂದಾಯಿತ ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೆಳಕಂಡತೆ ಆದೇಶ

ಸಂ/ಕಂ/ಪಹಣಿ /ತಕರಾರು/10/2015-16 ದಿನಾಂಕ:-

## ಆದೇಶ

ಪಿಠೀಕೆಯಲ್ಲಿ ವಿವರಿಸಿದ ಹಿನ್ನಲೆ, ಸಂದರ್ಭ, ಕಾರಣಗಳಿಂದಾಗಿ ಶಿವಲಿಂಗನಹಳ್ಳಿ ಗ್ರಾಮದ ಸ.ನಂ. 362A (ವಿ) 4.27 ಎಕರೆ ಜಮೀನನ್ನು ನೊಂದಾಯಿತ ಕ್ರಯಪತ್ರ ಡಾ.ನಂ 838/2015-16. ದಿನಾಂಕ 05/06/2015ರ ಪ್ರಕಾರ ಶ್ರೀ ಕರೇಗೌಡ್ರ ಶಿವಕುಮಾರ ತಂದೆ ಲೇಟ್ ಫಕ್ಕೀರಗೌಡ ಶಿವಲಿಂಗನಹಳ್ಳಿ ಇವರಿಂದ ಶ್ರೀಮತಿ ಗುರವ ಅವ್ವಕ್ಕ ಉರ್ಫ್ ಅವ್ವಬಾಯಿ ತಂದೆ ದುಂಡಪ್ಪ ಮಾಗಳ ಇವರ ಹೆಸರಿಗೆ ಕ್ರಯ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:- ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ತಹಶೀಲ್ದಾರರು
ಹೂವಿನಹಡಗಲಿ

ಪ್ರತಿಯನ್ನು:-

1)ವಾದಿ/ಪ್ರತಿವಾದಿಗಳಿಗೆ ಹಾಗೂ ಅವರ ಪರ ವಕೀಲರಿಗೆ
2)ಗಣಕೀರಣ ಕೇಂದ್ರ ಶಾಖೆ ಶಿರಸ್ತೇದಾರರು ತಾಲೂಕ ಕಛೇರಿ ಹಡಗಲಿ ಇವರಿಗೆ
3)ಕಂದಾಯ ನೀರಿಕ್ಷಕರು ಹಡಗಲಿ ಇವರಿಗೆ
4)ಹೆಚ್ಚಿನ ಪ್ರತಿ ಕಛೇರಿ ಕಡತಕ್ಕೆ